ವಿರೋಧಿಸಿ, ಎಲ್ಲಾ ಭಾರತದ ಭಾಷೆಯ ಹಾಡುಗಳಿಗೂ ಅವಕಾಶ ಇರಲೇಬೇಕೆಂದು ಹಟ ಹಿಡಿದು ಸಾಧಿಸಿದ. 'ಜೋಕೆ, ನಾನು ಬಳ್ಳಿಯ ಮಿಂಚು...' ಎನ್ನುವ ಅಪ್ಪಟ ಕನ್ನಡದ ಹಾಡಿನ ಜೊತೆಗೆ, ಯಾವುದೋ ಮಣಿಪುರಿ ಹಾಡು, ಮಾರ್ವಾಡಿ ಹಾಡುಗಳು ಕಂಪೆನಿಯಲ್ಲಿ ಕೇಳಿಸಲಾರಂಭಿಸಿದವು.

ವರ್ಷಕ್ಕೆ ಒಂದೆರಡು ದಿನ ನಮ್ಮ ಕಂಪೆನಿಯಲ್ಲಿ 'ಎಥ್ನಿಕ್ ಡೇ' ಆಚರಿಸುವ ಪದ್ಧತಿಯಿತ್ತು. ಹುಡುಗಿಯರು ಸಾಮಾನ್ಯವಾಗಿ ರೇಷ್ಮೆ ಸೀರೆಯನ್ನು ಉಟ್ಟುಕೊಂಡು ಬಂದರೆ, ದಕ್ಷಿಣ ಭಾರತದ ಹುಡುಗರು ಪಂಚೆಯನ್ನೂ, ಉತ್ತರ ಭಾರತದ ಹುಡುಗರು ಜುಬ್ಬಾ – ಪೈಜಾಮವನ್ನು ಹಾಕಿಕೊಂಡು ಬರುವುದು ಸ್ವಾಭಾವಿಕವಾಗಿತ್ತು. ನಿಮ್ಮ ರಾಜ್ಯದ, ನಿಮ್ಮ ಮನೆಯ ಸಂಸ್ಕೃತಿಯನ್ನು ಬಿಂಬಿಸುವ ಉಡುಗೆತೊಡುಗೆಗಳು ಈ ದಿನ ಪ್ರದರ್ಶನಗೊಳ್ಳಲಿ ಎಂದು ಎಲ್ಲರಿಗೂ ಇ–ಮೇಲ್ ಬರೆಯುತ್ತಿದ್ದೆವು. ದಿನದ ಕೊನೆಯಲ್ಲಿ ಎಲ್ಲಾ ಉದ್ಯೋಗಿಗಳೂ ಮತದಾನ ಮಾಡಿ, ಅತ್ಯಂತ ಸೊಗಸಾದ ಉಡುಗೆ ಯಾರದ್ದೆಂದು ನಿರ್ಧರಿಸಿ, ಅವರಿಗೆ ಒಂದಿಷ್ಟು ಹಣವನ್ನು ಉಡುಗೊರೆಯಾಗಿ ಕೊಡುವುದು ಬಹುವರ್ಷಗಳಿಂದ ನಡೆದುಕೊಂಡು ಬಂದ ಪದ್ಧತಿಯಾಗಿತ್ತು. ಆದರೆ ವೆಂಕಯ್ಯ ಬಂದ ನಂತರದ ಮೊದಲ ಎಥ್ನಿಕ್ ಡೇ ದಿನ ಸಂಗತಿಗಳು ಏರುಪೇರಾದವು. ಎಲ್ಲದಕ್ಕೂ ವೆಂಕಯ್ಯನ ವೇಷವೇ ಕಾರಣವೆನ್ನುವುದು ತಳ್ಳಿಹಾಕಲಾಗುವುದಿಲ್ಲ.

★★★

ಆವತ್ತು ಬೆಳಿಗ್ಗೆಯೇ ನಂಗೆ ಸೆಕ್ಯೂರಿಟಿಯವರಿಂದ ಫೋನ್ ಬಂತು. "ಅರ್ಜೆಂಟ್ ಇಲ್ಲಿಗೆ ಬರ್ರಿ ಸಾರ್" ಎಂದು ಬೇಡಿಕೊಂಡರು. "ಅಂಥಾದ್ದು ಏನಾಗಿದೆ ರ್‍ರೀ..." ಅಂದ್ರೆ, "ವೆಂಕಯ್ಯ ಮೂರು ಕುರಿ ತಕೊಂಡು ಬಂದಾನೆ ಸಾರ್... ಅವನ್ನೂ ಆಫೀಸಿನೊಳಗೆ ಬಿಡಬೇಕು ಅಂತಿದ್ದಾನೆ" ಎಂದು ಗೋಳಾಡಿದರು. ಈ ವೆಂಕಯ್ಯ ಕುರಿಗಳನ್ಯಾಕೆ ಆಫೀಸಿಗೆ ತಂದ ಎಂದು ನನಗೆ ತಲೆಕೆಟ್ಟಿತು. ಆದರೂ ಕುತೂಹಲದಿಂದ ಕಂಪೆನಿಯ ಗೇಟಿನ ಕಡೆ ಹೊರಟೆ. ಅಂದು ನಾನು ಕಚ್ಚೆ ಹಾಕಿ ಧೋತ್ರವನ್ನುಟ್ಟು, ಕೆಂಪು ಶಲ್ಯವನ್ನು ಹೊದೆದು, ನಾಮಮುದ್ರೆಗಳನ್ನು ಢಾಳಾಗಿ ಹಾಕಿಕೊಂಡು ಬಂದಿದ್ದೆ. ಅದು ನನ್ನ ಎಥ್ನಿಕ್ ಡೇ ಧಿರಿಸಾಗಿತ್ತು. ಇಡೀ ದಿನ ನಮ್ಮಪ್ಪನೇ ನನ್ನ ಮೈಯೊಳಗೆ ಸೇರಿಕೊಂಡಂತಹ ಭಾವ ನನಗೆ ಆ ದಿನ ಆಗುತ್ತಿತ್ತು. ಅಪ್ಪನ ನಿತ್ಯದ ಉಡುಗೆ ಅದಾದರೂ, ನನಗೆ ಅದನ್ನು ಹಾಕಿ ಅಷ್ಟಾಗಿ ಅಭ್ಯಾಸವಿರಲಿಲ್ಲ. ಆದ್ದರಿಂದ ನಡೆಯುವಾಗ ಎಲ್ಲಿ ಧೋತ್ರ ಅಡ್ಡ ಬಂದು ಬಿದ್ದುಬಿಡುತ್ತೀನೋ ಎಂಬ ಭಯದಿಂದ ನಿಧಾನಕ್ಕೆ ಹೆಜ್ಜೆ ಹಾಕುತ್ತಿದ್ದೆ. ಎದೆಯ ಮೇಲೆ ಹೊದೆದ ನುಣುಪಾದ ರೇಶ್ಮೆಯ ಶಲ್ಯ ಜಾರಿ ಬಿದ್ದು, ಬೆತ್ತಲೆ ಎದೆ ಎಲ್ಲಿ ಪ್ರದರ್ಶನವಾಗುತ್ತದೋ ಎಂಬ ಭಯದಿಂದ ಅದನ್ನು ಮತ್ತೆ ಮತ್ತೆ ಹೊದೆದುಕೊಳ್ಳುತ್ತಿದ್ದೆ. ಒಂದಿಬ್ಬರು ಹುಡುಗರು "ಭಟ್ರೆ, ತೀರ್ಥ ಕೊಡ್ರಿ..." ಎಂದು ಅಂಗೈಯನ್ನು ನನ್ನ ಮುಂದೊಡ್ಡಿ ತಮಾಷೆ ಮಾಡಿ ನನ್ನ ಖುಷಿಯನ್ನು ಹೆಚ್ಚಿಸಿದ್ದರು.

ಗೇಟಿನ ಬಳಿ ನಿಂತ ವೆಂಕಯ್ಯನನ್ನು ಗುರುತು ಹಿಡಿಯಲು ನನಗೆ ಸ್ವಲ್ಪ ಸಮಯವೇ ಬೇಕಾಯ್ತು. ಮೊಣಕಾಲ ಮೇಲೆ ಕಚ್ಚೆ ಹಾಕಿ ಉಟ್ಟ ಅತ್ಯಂತ ಕೊಳಕು ಪಂಚೆ, ಭರ್ಜರಿ ಮೀನುಖಂಡಗಳನ್ನು ಹೊಂದಿರುವ ಕಾಲುಗಳಿಗೆ ಒಂದು ಬೆಳ್ಳಿಯ ಕಡಗ, ರೋಮಭರಿತ ಎದೆಯ ಮೇಲೆ ಹೊದ್ದ ಒಂದು ಹರಕು ಕಂಬಳಿ, ಅದರ ಮೇಲೆ ಮರದ ದೊಡ್ಡ ಹಿಡಿಕೆಯ ಕೊಡಲಿ, ಕೊರಳಲ್ಲಿ ಕಾಶಿದಾರದಲ್ಲಿ ಕಟ್ಟಿದ ಹುಲಿಯುಗುರಿನ ಪದಕದ ಸರ, ಬಲತೋಳಿಗೆ ಕೆಂಪುದಾರದಿಂದ ಅತ್ಯಂತ ಬಿಗಿಯಾಗಿ ಕಟ್ಟಿದ ಬೆಳ್ಳಿ ತಾಯಿತ, ಪಂಚೆಗೆ ಸಿಕ್ಕಿಸಿದ ಒಂದು